ಟ್ರೈನ್ ವಿಷಲ್ ಹೊಡೆಯಿತು. ಹೊರಟಿತು.

ನಾನು ಕರ್ಚೀಫು ತೆಗೆದು ಹಾರಿಸಿದೆ.

ಇದುವರೆಗೂ ಇಲ್ಲದಿದ್ದ ದುಃಖ ಈಗ ನನ್ನನ್ನು ಆವರಿಸಿತ್ತು. ಅವಳು ಮದುವೆಯ ಬಗ್ಗೆ ಆಡಿದ ಮಾತು, ಒಳಗೇ ಒಂದು ಬಗೆಯ ಚಳಿಯನ್ನು ನಾಟಿಸಿತ್ತು.

ಪ್ಲಾಟ್‌ಫಾರಂನಿಂದ ಹೊರಬಂದಾಗ. ಗೇಟಿನಲ್ಲಿಯೇ ನಮ್ಮ ಸೆಕ್ಷನ್ ಸೂಪರಿಂಟೆಂಡೆಂಟ್ ವೆಂಕಟೇಶಯ್ಯನವರು. 'ಏನು ಆನಂದ್. ಸ್ನೇಹಿತರನ್ನ ಕಳಿಸಲಿಕ್ಕೆ ಬಂದಿದ್ದಿರೋ?' ಎಂದು ಕೇಳಿದಾಗ. ನನಗೆ ಬೇರೆ ಯಾವುದೋ ಪ್ರಪಂಚಕ್ಕೆ ತಂದು ಹಾಕಿದಂತಾಯಿತು.

ವೆಂಕಟೇಶಯ್ಯ ಅಲ್ಲಿಗೇ ನಿಲ್ಲಿಸಲಿಲ್ಲ. ನನ್ನ ಮಧುಳ ಓಡಾಟವನ್ನು ಒಂದು ಬಗೆಯ ಕಹಿಯಿಂದಲೇ ಅನುಭವಿಸಿರಬೇಕು. ಅವರಾಗಿ ಹೇಳಿದರು–

'ಮಾಧವಿ ಬಹಳ ಒಳ್ಳೆಯ ಹುಡುಗಿ. ಇಲ್ಲಿಗೆ ಓದಲಿಕ್ಕೆ ಬಂದಾಗಲೇ ನನ್ನ ಹತ್ತಿರ ಬಂದಿದ್ದಳು. ನಾನೂ ಸಾಧ್ಯವಾದಷ್ಟು ಸಹಾಯ ಮಾಡಿದೆ. ನಿಜವಾಗಿಯೂ ಸುಮಾರು ಇಪ್ಪತ್ತು ವರ್ಷದ ಹಿಂದಿನ ಮಾತು. ಅವಳ ಫಾದರೂ ನಾನೂ ಒಟ್ಟಿಗೇ ನೌಕರಿ ಶುರು ಮಾಡಿದ್ದು.'

ಈ ವೇಳೆಗೆ ನಾವು ಸ್ಟೇಷನ್‌ನ ಕಾರ್ ಪಾರ್ಕಿಂಗ್ ಬಳಿ ಬಂದಿದ್ದೆವು. ಕಾರಿಗೆ ಒರಗಿ ನಿಂತುಕೊಂಡು ವೆಂಕಟೇಶಯ್ಯ ಹೇಳಿದರು–

'ನಾನೂ ಮನೆಯವರನ್ನೆಲ್ಲ ಕಳಿಸೋದಿಕ್ಕೆ ಬಂದೆ. ನನ್ನ ಮಗ ಸ್ಟೇಟ್ಸ್‌ಗೆ ಹೋಗ್ತಿದಾನೆ ಮುಂದಿನವಾರ. ಈಗ ಬೆಂಗಳೂರಿಗೆ ಹೋದ. ನಮ್ಮ ಮನೆಯವಳೋ. ಅವಳಿಗೆ ಎಲ್ಲಿಲ್ಲದ ಸಡಗರ. ಅವಳನ್ನೂ ಕಳಿಸಿಕೊಟ್ಟುಬಿಟ್ಟೆ. ಈ ಫೇರ್‌ವೆಲ್ ಹೇಳೋದಿದೆಯಲ್ಲ, ಇದೊಂದು ಬಹಳ ಕಷ್ಟದ ಕೆಲಸ. ಇನ್ನು ಬೆಂಗಳೂರಿನಿಂದ ಹೇಳೋದಕ್ಕೆ ಮತ್ತೆ ಹೋಗಬೇಕಲ್ಲ, ಅದಕ್ಕೆ ಇದೊಂದು ತರಹ ರಿಹರ್ಸಲ್.'

ವೆಂಕಟೇಶಯ್ಯ ಒಮ್ಮೆ ಗಹಗಹಿಸಿ ನಕ್ಕರು.

ನಾನು ನಮಸ್ಕಾರ ಹೇಳುವುದರಲ್ಲಿದ್ದೆ, ಅವರೇ ಮತ್ತೆ ಆರಂಭಿಸಿದರು.

'ನೋಡು ಆನಂದ್. ಮಾಧವಿ ಎಲ್ಲ ಒಳ್ಳೆಯವಳೆ. ಆದರೆ ತಂದೆಯ ಒಳ್ಳೆಯತನದ ಜತೆಗೆ, ತಾಯಿಯ ಘಾಟಿತನವೂ ಸ್ವಲ್ಪ ಸೇರಿಕೊಂಡಿದೆ. ಎಲ್ಲ ಸರಿಯೇ, ಆದರೆ ಬೇಗ ಹಿಡಿತಕ್ಕೆ ಸಿಕ್ಕೋಳಲ್ಲ. ನಿಮ್ಮಂತಹ ಹುಡುಗರಿಗೆ ಇದನ್ನೆಲ್ಲ ಹೇಳಬೇಕೆ?...' ಈ ಕೊನೆಯ ಮಾತು ಸೇರಿಸಿದ್ದರ ಔಚಿತ್ಯ ನನಗೆ ಪ್ರತ್ಯೇಕವಾಗಿ ಹೇಳಬೇಕಾಗಿರಲಿಲ್ಲ. ಆದರೆ ಆತ ತನ್ನ ರಾಕ್ಷಸತನವನ್ನು ಅದರಿಂದ ಮುಚ್ಚಿಡೋದಕ್ಕೆ ಪ್ರಯತ್ನ ಮಾಡಿದರೆ ಸಾಧ್ಯವಾದೀತೇ? ನನಗೂ ಕೊಂಚ ರೇಗಿತು, ನಾನೆಂದೇ–

'ಯಾರು ಯಾರ ಹಿಡಿತಕ್ಕೆ ತಾನೆ ಯಾಕೆ ಸಿಕ್ಕಬೇಕು ಸಾರ್?'

'ಅಲ್ಲ. ಅದು ಸರೀನೇ– ನೀನು ಹೇಳೋದು' ಕಾರಿನ ಬಾಗಿಲು ತೆರೆದು ಒಳಗೆ ಕುಳಿತು, ಸ್ಟಾರ್ಟ್ ಮಾಡುತ್ತಾ ಹೇಳಿದರು.

ಕಾರು ಹೊರಟುಹೋದಂತೆ, ದಟ್ಟವಾದ ಕತ್ತಲು ಸುತ್ತಲೂ ಹಬ್ಬಿಕೊಂಡಿತು. ಮಧುಳ ಚಿತ್ರ ಮರುಕಳಿಸಿ ಬಂದು, ಕಣ್ಣ ಮುಂದೆ ನಿಂತಿತು. ಅವಳು ಮತ್ತೆ ಹಿಂದಿನಂತೆಯೇ ವಾಪಸ್ಸು ಬರಲಾರಳೆಂಬ ಶಂಕೆ ಬಾಧಿಸತೊಡಗಿತು. ನನ್ನ– ಅವಳ ನಡುವೆ ಆಹ್ಲಾದಕರವಾಗಿ ತೊನೆದಾಡುತ್ತಿದ್ದ ಹೂಗೊಂಚಲೊಂದು ತಳವಿರದ ಪ್ರಪಾತಕ್ಕೆ ಬೀಳುತ್ತಿರುವಂತೆ ಭಾಸವಾಯಿತು.

ದೃಢ ಹೆಜ್ಜೆಗಳನ್ನು ಬಿಟ್ಟು, ಇಡೀ ಪ್ರಪಂಚವೇ ಅಳಿಸಿಹೋಗಿತ್ತು.